# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 152 | Pages. 2 | Date: 19-04-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 152 - ಪುಟಗಳು : 2 - 19 ಏಪ್ರಿಲ್ 2025 ಶನಿವಾರ Ph: 8762954248 ದರ : ₹1


# ಜಾತಿ ಗಣತಿ ಅಂಗೀಕಾರಕ್ಕೆ ಸಮಯ ಬೇಕು: ಸತೀಶ್

## ಬಿಜೆಪಿಯಿಂದ ಸರ್ಕಾರ ಬೀಳಿಸುವ ಯತ್ನ ನಾವು ಜಾಗೃತರಾಗಿದ್ದೇವೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು : ಜಾತಿ ಗಣತಿ ಕುರಿತು ಸಾಕಷ್ಟು ಚರ್ಚೆ, ಅಧ್ಯಯನ ಆಗಬೇಕಿದ್ದು ತರಾತುರಿಯಲ್ಲಿ ವರದಿ ಅಂಗೀಕಾರ ಆಗುವುದಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು.

ಜೈ ಭೀಮ್ ಯುವಕರ ಸಂಘದಿಂದ ಶುಕ್ರವಾರ ಆಯೋಜಿಸಿದ್ದ ಜೈ ಭೀಮ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ವಿಚಾರವಾಗಿ ಯಾವುದೇ ನಿರ್ಧಾರಕ್ಕೆ ಬರಲು ಆಗಿಲ್ಲ. ಅದಕ್ಕೆ ಬಹಳ ಸಮಯ ಬೇಕಾಗುತ್ತದೆ. ಸುಲಭವಾಗಿ ತಕ್ಷಣ ನಿರ್ಧಾರ ಕೈಗೊಳ್ಳುವ ವಿಷಯವಲ್ಲ ಎಂದರು.

ಸಮುದಾಯದ ಸಮಸ್ಯೆ ಬಂದಾಗ ಜೋರಾಗಿ ಮಾತನಾಡಬೇಕಾಗುತ್ತದೆ. ಸಣ್ಣದಾಗಿ ಮಾತನಾಡಿದರೆ ಯಾರೂ ಕೇಳಲ್ಲ. ಜೋರಾಗಿಯೇ ಮಾತನಾಡಬೇಕು. ಜೋರು ಅಂದರೆ ಅದೇನು ವಿರೋಧ ಅಲ್ಲ. ತಮ್ಮ ಸಮಸ್ಯೆಗಳನ್ನು ಹೇಳಲು ಸಚಿವರು ಸಭೆಯಲ್ಲಿ ಪ್ರಯತ್ನ ಮಾಡಿದ್ದಾರೆ ಎಂದರು.

ಜಾತಿ ಗಣತಿಯಲ್ಲಿ ಲೋಪ ಆಗಿದೆ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ. ಎಲ್ಲರೂ ಸಹಿ ಮಾಡಿದ ದಾಖಲೆ ತಹಸೀಲ್ದಾರ್ ಕಚೇರಿಯಲ್ಲಿವೆ. ಗಣತಿ ಬರೆಸುವವರೇ ಗೊಂದಲ ಮಾಡಿದ್ದಾರೆ. ಬೇರೆ ಬೇರೆ ಜಾತಿ ಬರೆಸಿರುವುದರಿಂದ ಕೆಲವು ಸಮುದಾಯದ ಅಂಕಿ ಸಂಖ್ಯೆ ಆ ಮಟ್ಟಕ್ಕೆ ಬರಲು ಆಗಿಲ್ಲ. ಆಗಿರುವ ಲೋಪವನ್ನು ಸರಿ ಮಾಡೋಣ ಎಂದರು.

ಜಾತಿ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿಲ್ಲ. ಜನರಿಗೆ ಒಳ್ಳೆಯದಾಗುವ ಕೆಲಸಗಳನ್ನಷ್ಟೇ ಮಾಡುತ್ತೇವೆ. ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಕಾರಣಕ್ಕೆ ವರದಿ ಬಗ್ಗೆ ಚರ್ಚೆ ಆರಂಭಿಸಿದ್ದೇವೆ ಎಂದರು.

ಜಾತಿ ಹೆಸರಿನಲ್ಲಿ ಸಮಾಜ ಒಡೆಯಲು ಯತ್ನಿಸುತ್ತಿದ್ದಾರೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿ, ಬಿಜೆಪಿಯವರು ಆರೋಪ ಮಾಡಲಿ, ನಾವು ಜನರಿಗೆ ಒಳ್ಳೆಯದಾಗುವುದನ್ನು ಮಾಡುತ್ತೇವೆ ಅಷ್ಟೇ. ಜಾತಿಗಣತಿ ಯಾರಿಗೂ ಕೆಟ್ಟದ್ದಲ್ಲ, ವಿರೋಧವೂ ಅಲ್ಲ ಒಳ್ಳೆಯದಾಗಲು ಮಾಡಿದ್ದೇವೆ. ಇನ್ನೂ ಚರ್ಚೆ ಹಂತದಲ್ಲಿರುವುದರಿಂದ ಕಾಯೋಣ, ಇನ್ನೂ ಬಹಳ ಸಮಯವಿದೆ. ಲಾಭ, ನಷ್ಟದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾವ ಸಮುದಾಯದ ಜನಸಂಖ್ಯೆ ಎಷ್ಟಿದೆ ಎಂದು ಗುರುತಿಸಲು ಸರ್ವೆ ಕಾರ್ಯ ನಡೆಸಲಾಗಿದೆ. ಇದರಿಂದ ಪಕ್ಷಕ್ಕೇನು ಲಾಭವಿಲ್ಲ, ಜನರಿಗೆ ಅನುಕೂಲವಾಗುತ್ತದೆ. ವರದಿ ಇನ್ನೂ ಜಾರಿ ಮಾಡಿಲ್ಲ, ಚರ್ಚೆ ಹಂತದಲ್ಲಿದೆ ಎಂದು ತಿಳಿಸಿದರು.

## ಅನುದಾನಕ್ಕೆ ಶಾಸಕರ ಮೊರೆ

ಚನ್ನರಾಯಪಟ್ಟಣ: ತಾಲ್ಲೂಕಿನ ರಸ್ತೆ ಕಾಮಗಾರಿಗೆ ಅಗತ್ಯ ಅನುದಾನ ನೀಡಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮನವಿ ಸಲ್ಲಿಸಿದರು.

ಕಾರ್ಯನಿಮಿತ್ತ ಶುಕ್ರವಾರ ಅರಕಲಗೂಡಿಗೆ ತೆರಳುತ್ತಿದ್ದ ಸಚಿವರನ್ನು ಪಟ್ಟಣದಲ್ಲಿ ಸ್ವಾಗತಿಸಿ ಪ್ರಸ್ತಾವನೆ ಸಲ್ಲಿಸಿದರು. ತಾಲ್ಲೂಕಿನಲ್ಲಿ ಸಾಕಷ್ಟು ಜಿಲ್ಲಾ ರಸ್ತೆಗಳ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ ಅನುದಾನ ನೀಡಬೇಕು. ಆ ಮೂಲಕ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಕೋರಿದರು. ಸಚಿವರು ಸಹ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದರು.

ಸಂಸದ ಶ್ರೇಯಸ್ ಪಟೇಲ್, ಮಾಜಿ ಶಾಸಕ ಸಿ.ಎಸ್. ಪುಟ್ಟೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಎ. ಮಂಜಣ್ಣ, ಪುರಸಭೆ ಅಧ್ಯಕ್ಷ ಮೋಹನ್, ಎಪಿಎಂಸಿ ಮಾಜಿ ಅಧ್ಯಕ್ಷ ವಳಗೇರಹಳ್ಳಿ ಮಂಜಣ್ಣ ಇತರರಿದ್ದರು.

## ಜಾತಿ ಗಣತಿ ಅಂತಿಮಕ್ಕೆ 6 ತಿಂಗಳು ಬೇಕು



ಬಿಜೆಪಿಯವರು ಸರ್ಕಾರ ಬೀಳಿಸಲು ಯತ್ನಿಸುತ್ತಿದ್ದಾರೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿ, ಸರ್ಕಾರ ಕೆಡವಲು ಮೊದಲ ದಿನದಿಂದಲೂ ಪ್ರಯತ್ನ ನಡೆಯುತ್ತಿದೆ. ಎಲ್ಲಾ ಒಗ್ಗಟ್ಟಾಗಿರಬೇಕು, ಹುಷಾರಾಗಿರಬೇಕು ಎಂದು ಹೇಳಿರುವ ಮಾತಿನಲ್ಲಿ ಸತ್ಯಾಂಶವಿದೆ. ಸರ್ಕಾರ ಬೀಳಿಸುವ ಪ್ರಯತ್ನ ಇದ್ದೆ ಇರುತ್ತದೆ. ಅದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ.

ಮೋದಿ, ಅಮಿತ್ ಶಾ ಅವರು ಪ್ರಯತ್ನ ಮಾಡುತ್ತಾರೆ, ಬೇರೆ ರಾಜ್ಯದಲ್ಲಿ ಮಾಡಿರುವ ಸಾಕಷ್ಟು ಉದಾಹರಣೆಗಳಿವೆ. ಇಲ್ಲಿಯೂ ಅದೇ ಪ್ರಯತ್ನ ಮಾಡುತ್ತಾರೆ. ನಾವು ಹುಷಾರಾಗಿ ಇರಬೇಕು ಅಷ್ಟೇ ಎಂದರು.

ಜಾತಿಗಣತಿ ವಿಚಾರಕ್ಕೆ ಲಿಂಗಾಯತ ಸಚಿವರು ರಾಜೀನಾಮೆ ನೀಡಬೇಕೆಂಬ ಶಾಸಕ ಶಿವಗಂಗಾ ಹೇಳಿಕೆಗೆ ಪ್ರತಿಕ್ರಿಯಿಸಿ, ವರದಿ ಎಲ್ಲಿ ಜಾರಿಯಾಗಿದೆ, ಇನ್ನೂ ವರದಿ ಜಾರಿ ಮಾಡೇ ಇಲ್ಲ. ಅದು ಜಾರಿಗೆ ಬಂದಾಗ ನೋಡೋಣ.

ಆ ಹಂತಕ್ಕೆ ಇನ್ನೂ ಬಂದೇ ಇಲ್ಲ ಆಗ ನೋಡೋಣ. ಶೈಕ್ಷಣಿಕ, ಸಾಮಾಜಿಕ ಸ್ಥಿತಿಗತಿ ಅಧ್ಯಯನ ಮಾಡುವುದರಲ್ಲಿ ಜಾತಿ ಕಾಲಂ ಇದೆ. ಹಾಗಾಗಿ ಜಾತಿ ಬಂದೇ ಬರುತ್ತದೆ. ವರದಿ ಜಾರಿಗೆ ಆರು ತಿಂಗಳು ಆಗಬಹುದು, ಒಂದು ವರ್ಷ ಆಗಬಹುದು ಇನ್ನೂ ನಾವು ಅಂತಿಮ ಹಂತಕ್ಕೆ ಬಂದೇ ಇಲ್ಲ, ಬಂದಾಗ ಅದರ ಬಗ್ಗೆ ಉತ್ತರ ನೀಡುತ್ತೇವೆ. ಮರು ಪರಿಶೀಲನೆ ವಿಷಯ ಚರ್ಚೆಗೆ ಬಂದಿಲ್ಲ ಎಂದರು.

ಸಂಸದ ಶ್ರೇಯಸ್ ಪಟೇಲ್, ಕಾಂಗ್ರೆಸ್ ಮುಖಂಡ ಶ್ರೀಧರ್‌ಗೌಡ ಮತ್ತಿತರರು ಹಾಜರಿದ್ದರು.

## ವಸಂತರಾಣಿ ನೋರನಕ್ಕಿ ಗ್ರಾಪಂ ಅಧ್ಯಕ್ಷೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ದಂಡಿಗನಹಳ್ಳಿ ಹೋಬಳಿ ನೋರನಕ್ಕಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವಸಂತರಾಣಿ ಶುಕ್ರವಾರ ಅವಿರೋಧ ಆಯ್ಕೆಯಾದರು.

ತಹಶೀಲ್ದಾರ್ ವಿ.ಎಸ್. ನವೀನ್ ಕುಮಾರ್ ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ವಸಂತರಾಣಿ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆ ಘೋಷಿಸಲಾಯಿತು. ಜೆಡಿಎಸ್ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ಸಂಭ್ರಮಿಸಿದರು.

ಗ್ರಾ.ಪಂ. ನೂತನ ಅಧ್ಯಕ್ಷೆ ವಸಂತರಾಣಿ ಮಾತನಾಡಿ, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಆಶೀರ್ವಾದದಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದೇನೆ. ನನ್ನ ಬೆಂಬಲಿಸಿದ ಎಲ್ಲಾ ಸದಸ್ಯರಿಗೂ ಪಕ್ಷದ ಹಿರಿಯರಿಗೆ ಧನ್ಯವಾದ ಸಲ್ಲಿಸುತ್ತೇನೆ. ಸದಸ್ಯರ ಸಹಕಾರದಿಂದ ಗ್ರಾಮದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಜೆಡಿಎಸ್ ಮುಖಂಡರಾದ ಪುನರ್ವಿಕ ನವೀನ್, ಶ್ರೀನಿವಾಸಪುರ ದಿನೇಶ್, ಮಂಜಣ್ಣ, ಸತೀಶ್ ಇತರರಿದ್ದರು.

## ಸಿಇಟಿ ಪರೀಕ್ಷೆಗೆ ನಿರಾಕರಣೆ ವೇಣುಗೋಪಾಲ್ ಖಂಡನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಜನಿವಾರ ಧರಿಸಿ ಬಂದವರಿಗೆ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ನೀಡದೆ ಇರುವುದು ರಾಜ್ಯ ಸರ್ಕಾರದ ಸರ್ವಾಧಿಕಾರಿ ಧೋರಣೆ ಎಂದು ಬ್ರಾಹ್ಮಣ ಸಂಘದ ಸದಸ್ಯ ಎಸ್.ಕೆ. ವೇಣುಗೋಪಾಲ್ ಕಿಡಿಕಾರಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ಹಾಗೂ ಕೈಗೆ ಹಾಕಿದ್ದ ಕಾಶಿ ದಾರ ತೆಗೆಯಲು ಹೇಳಿರುವುದು ಅಪರಾಧ. ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೂ ಧರ್ಮದ ಆಚರಣೆಗಳನ್ನು ಇನ್ನೊಬ್ಬರಿಗೆ ತೊಂದರೆ ಆಗದಂತೆ ಪಾಲಿಸುವ ಅವಕಾಶ ನೀಡಿದೆ. ಹೀಗಿರುವಾಗ ಸಾಮಾನ್ಯ ನಾಗರಿಕನ ಹಕ್ಕನ್ನು ಮೊಟಕುಗೊಳಿಸುವ ಪ್ರಯತ್ನವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಅಲ್ಪಸಂಖ್ಯಾತರನ್ನು ಓಲೈಸುವ ನೆಪದಲ್ಲಿ ಬ್ರಾಹ್ಮಣ ಸಮಾಜದ ಧಾರ್ಮಿಕ ಆಚರಣೆಗಳನ್ನು ತಡೆಯುವುದು ಎಷ್ಟು ಸರಿ ಎಂದು ಅವರು ಪ್ರಶ್ನಿಸಿದ್ದಾರೆ. ಜನಿವಾರ ಧರಿಸಿದ್ದರು ಎಂಬ ಮಾತ್ರಕ್ಕೆ ಶಿವಮೊಗ್ಗ, ಬೀದರ್ ಹೀಗೆ ನಾನಾ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳನ್ನು ಹೊರ ಹಾಕಲಾಗಿದೆ. ಕಷ್ಟಪಟ್ಟು ಓದಿ ಜೀವನದಲ್ಲಿ ಉನ್ನತ ಸ್ಥಾನಕ್ಕೆ ತಲುಪಬೇಕೆಂದಿದ್ದ ಮಕ್ಕಳ ಭವಿಷ್ಯಕ್ಕೆ ಕಾಂಗ್ರೆಸ್ ಸರ್ಕಾರ ಕೊಳ್ಳಿ ಇಟ್ಟಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ನಾದ ಧ್ಯಾನ ಚಕ್ರ ಕಾರ್ಯಕ್ರಮ ಎ. 27ಕ್ಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಏ. 27 ರಂದು ನಾದ ಧ್ಯಾನ ಚಕ್ರ-5 ಉಚಿತ ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದು ಪಿರಮಿಡ್ ವರ್ಲ್ಡ್ ಫೌಂಡೇಶನ್ ಮುಖ್ಯಸ್ಥ ಅಯ್ಯಪ್ಪ ಪಿಂಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಪಿಎಸ್‌ಎಸ್‌ಎಂ ಮತ್ತು ಪಿರಮಿಡ್ ವರ್ಲ್ಡ್ ಫೌಂಡೇಶನ್ ವತಿಯಿಂದ ಭಾನುವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 2ರ ವರೆಗೆ ತರಬೇತಿ ನಡೆಯಲಿದೆ. ಬೆಳಿಗ್ಗೆ 8.30ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. 9 ರಿಂದ ಮಧ್ಯಾಹ್ನ 12 ಗಂಟೆವರೆಗೂ ನಾದ ಧ್ಯಾನ ಇರುತ್ತದೆ. ನಂತರ ಧ್ಯಾನದ ಬಗ್ಗೆ ಉಪನ್ಯಾಸ ನಡೆಯಲಿದೆ. ಮಧ್ಯಾಹ್ನ 1.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಮಾರೋಪ ಸಮಾರಂಭ ಜರುಗಲಿದೆ. ಬಳಿಕ ಎಲ್ಲಾ ಧ್ಯಾನಿಗಳಿಗೆ ಶುದ್ಧ ಸಾತ್ವಿಕ ಸಸ್ಯಹಾರ ಉಪಾಹಾರ, ಊಟ ನೀಡಲಾಗುವುದು ಎಂದು ಹೇಳಿದರು.

ಈಗಾಗಲೇ ನಾದ ಧ್ಯಾನ ಚಕ್ರ-5 ಮೆಡಿಟೇಶನ್ ಅನ್ನು ರಾಜ್ಯದ ಮೂರ್ನಾಲ್ಕು ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಮಾಡಲಾಗಿದೆ. ಈಗ ಹಾಸನದಲ್ಲಿ ನಡೆಸಲಾಗುತ್ತಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇಂತಹ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಕಾರ್ಯಕ್ರಮ ಸಂಯೋಜಕಿ ಮಮತಾ ಮಾತನಾಡಿ, ನಗರದಲ್ಲಿ ಹಮ್ಮಿಕೊಂಡಿರುವ ವಿಶೇಷ ಕಾರ್ಯಕ್ರಮ ಇದಾಗಿದೆ. ಧ್ಯಾನವನ್ನು ಸುಲಭವಾಗಿ ಮನೆಯಲ್ಲೇ ಮಾಡಬಹುದು. ಜೀವನದಲ್ಲಿ ಶಾಂತಿ, ನೆಮ್ಮದಿ, ಸಂತೋಷ ನೆಲೆಸಬೇಕೆಂದರೆ ಆರೋಗ್ಯ ಚೆನ್ನಾಗಿರಬೇಕು. ಉತ್ತಮ ಆರೋಗ್ಯಕ್ಕೆ ಧ್ಯಾನ ನೆರವಾಗುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಹ ಸಂಯೋಜಕ ಸ್ವಾಮಿಗೌಡ, ಬೂವನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಆರ್. ಬೊಮ್ಮೇಗೌಡ ಇದ್ದರು.

## ಬಸ್ ನಿಲ್ದಾಣ ಅಲ್ಲ ಕಳ್ಳರ ತಾಣ

ಹಾಸನ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಚಿನ್ನಾಭರಣ ಪ್ರಕರಣ ಹೆಚ್ಚುತ್ತಿದ್ದು ಅದರಲ್ಲೂ ಹಾಸನದ ಹೊಸ ಬಸ್ ನಿಲ್ದಾಣದಲ್ಲಿ ದಿನಕ್ಕೆ ಒಂದರಂತೆ ಪ್ರಕರಣಗಳು ದಾಖಲಾಗುತ್ತಿವೆ.

ಬಸ್ ನಿಲ್ದಾಣ, ಮಾರುಕಟ್ಟೆ, ಮತ್ತಿತರ ಜನದಟ್ಟಣೆ ಪ್ರದೇಶಗಳಲ್ಲಿ ಪೊಲೀಸ್ ಬಿಗಿ ಭದ್ರತೆ ಹಾಕಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಹೊಸ ಬಸ್ ನಿಲ್ದಾಣದಲ್ಲಿ ಮಹಿಳೆಯ ಕಣ್ತಪ್ಪಿಸಿ 50 ಸಾವಿರ ರೂ. ನಗದು ಹಾಗೂ 28 ಸಾವಿರ ರೂ. ಮೌಲ್ಯದ ಚಿನ್ನಾಭರಣ ಎಗರಿಸಿರುವ ಘಟನೆ ಇತ್ತೀಚೆಗೆ ನಡೆದಿದೆ. ಬೆಂಗಳೂರಿನ ನಾಗರಬಾವಿ ನಿವಾಸಿ ಶೈಲಜಾ ಹಣ ಕಳೆದುಕೊಂಡವರು. ಏ. 12 ರಂದು ಹಾಸನದ ತಾಯಿ ಮನೆಗೆ ಬಂದಿದ್ದ ಅವರು ಬೆಂಗಳೂರಿಗೆ ವಾಪಾಸ್ ಹೋಗುತ್ತಿದ್ದಾಗ ಘಟನೆ ನಡೆದಿದೆ. ಬೆಂಗಳೂರು ಕಡೆಗೆ ತೆರಳುವ ಬಸ್‌ಗಳು ನಿಲ್ಲುವ ಪ್ಲಾಟ್ ಫಾರಂ 1ರಲ್ಲಿ ನಿಂತಿದ್ದ ಅವರು ಬಸ್ ಬಂದ ತಕ್ಷಣ ಹತ್ತಿ ಬ್ಯಾಗ್ ಪರಿಶೀಲಿಸಿದಾಗ ಕಳುವಾಗಿರುವುದು ತಿಳಿದಿದೆ. 50 ಸಾವಿರ ರೂ. ಹಣ, 28 ಸಾವಿರ ರೂ. ಬೆಲೆ ಬಾಳುವ ಒಂದು ಜೊತೆ ಚಿನ್ನದ ಓಲೆ (3 ರಿಂದ 4 ಗ್ರಾಂ ತೂಕ) ಇದ್ದ ಚಿಕ್ಕ ಬ್ಯಾಗ್ ಅನ್ನು ಕಳವು ಮಾಡಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಹೊಸ ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್‌ನಲ್ಲಿ ವಿದ್ಯುತ್ ನಗರಕ್ಕೆ ಬರುವ ಮಾರ್ಗಮಧ್ಯದಲ್ಲಿ ಮಹಿಳೆಯ ಕಣ್ತಪ್ಪಿಸಿ 101 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಲಾಗಿದೆ.

ವಿದ್ಯುತ್ ನಗರದ ಸುಬ್ಬಮ್ಮ ಅವರು ಏ. 15 ರಂದು ಮೈಸೂರಿನಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಹಾಸನಕ್ಕೆ ಬಂದಿದ್ದರು. ಹೊಸ ಬಸ್ ನಿಲ್ದಾಣದಲ್ಲಿ ಇಳಿದು ಬ್ಯಾಗ್ ಪರಿಶೀಲಿಸಿದಾಗ ಬ್ಯಾಗ್ ಇತ್ತು.

ವಿದ್ಯುತ್ ನಗರಕ್ಕೆ ತೆರಳುವ ನಗರ ಸಾರಿಗೆ ಬಸ್ ಏರಿ ಕುಳಿತಾಗ ಟಿಕೆಟ್ ಪಡೆಯಲು ಆಧಾರ್ ಕಾರ್ಡ್ ತೋರಿಸಲು ಬ್ಯಾಗ್ ಪರಿಶೀಲಿಸಿದಾಗ ಚಿನ್ನಾಭರಣ ನಾಪತ್ತೆಯಾಗಿರುವುದು ಗೊತ್ತಾಗಿದೆ.

60 ಗ್ರಾಂ ತೂಕದ ಚಿನ್ನದ ಸರ, 35 ಗ್ರಾಂ ತೂಕದ ಸರ, 6 ಗ್ರಾಂನ ಓಲೆ ಕಳುವಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪರಿಹಾರ ವಿತರಣೆಗೆ ವಿಳಂಬ ಧೋರಣೆ ಬೇಡ

### ಮಲ್ಲಿಪಟ್ಟಣ ಏತ ನೀರಾವರಿ ಯೋಜನೆ : ಅಧಿಕಾರಿಗಳ ಸಭೆಯಲ್ಲಿ ಶಾಸಕ ಮಂಜು ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಮಲ್ಲಿಪಟ್ಟಣ ಏತ ನೀರಾವರಿ ಯೋಜನೆಗಾಗಿ ಭೂಮಿ ನೀಡಿರುವ ರೈತರಿಗೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗಬಾರದು ಹಾಗೂ ಆಗಸ್ಟ್ ವೇಳೆಗೆ ಮೊದಲ ಹಂತದ ಕಾಮಗಾರಿ ಪೂರ್ಣಗೊಳ್ಳಬೇಕು ಎಂದು ಶಾಸಕ ಎ.ಮಂಜು ಅಧಿಕಾರಿಗಳಿಗೆ ಸೂಚಿಸಿದರು.

ಕಟ್ಟೇಪುರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಸಭೆಯಲ್ಲಿ ಮಾತನಾಡಿದ ಅವರು, ಕಾಮಗಾರಿಗಾಗಿ 11 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ. 9 ಕೋಟಿ ರೂ. ಪರಿಹಾರ ಹಣವನ್ನು ಮೀಸಲಿರಿಸಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಫಲಾನುಭವಿ ರೈತರ ದಾಖಲೆಗಳನ್ನು ಸಿದ್ಧಪಡಿಸಿ ಕೊಡುವ ಕಾರ್ಯವನ್ನು ತುರ್ತಾಗಿ ಮಾಡಲಿದ್ದಾರೆ.

ಏತ ನೀರಾವರಿ ಯೋಜನೆ ಕಾಮಗಾರಿ ಪೂರ್ಣಗೊಂಡಿಲ್ಲ ಹಾಗೂ ಯೋಜನೆಗೆ ಜಮೀನು ವಶಪಡಿಸಿಕೊಂಡ ರೈತರಿಗೆ ಪರಿಹಾರದ ಮೊತ್ತ ನೀಡಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಭೂಮಿ ದಾಖಲೆಗಳು ಮತ್ತು ಒಡೆತನದ ಸಮಸ್ಯೆ ಇರುವುದನ್ನು ಪರಿಗಣಿಸಿ ಪರಿಹಾರ ನೀಡಲು ಸೂಚಿಸಲಾಗಿದೆ. ರೈತರು ಮುಂದೆ ಬರದಿದ್ದರೆ ಖಾತೆದಾರನ ಹೆಸರಿನಲ್ಲಿ ಹಣವನ್ನು ಠೇವಣಿ ಮಾಡಿ ಸಮಸ್ಯೆ ಬಗೆಹರಿದ ಬಳಿಕ ಫಲಾನುಭವಿಗೆ ಹಣ ಸಂದಾಯ ಮಾಡಬೇಕು ಎಂದರು.

120 ಕೋಟಿ ರೂ. ವೆಚ್ಚದ ಮೊದಲ ಹಂತದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಸೆಪ್ಟೆಂಬರ್‌ನಲ್ಲಿ ಪ್ರಾಯೋಗಿಕವಾಗಿ ನೀರು ಹರಿಸುವುದಾಗಿ ಗುತ್ತಿಗೆದಾರರು ಹೇಳಿದ್ದಾರೆ. ಈ ಯೋಜನೆಯಿಂದ ಸೋಮವಾರಪೇಟೆ ತಾಲ್ಲೂಕಿನ ಕೆಲಭಾಗ ಮಲ್ಲಿಪಟ್ಟಣ, ದೊಡ್ಡಮಗ್ಗೆ ಮತ್ತು ಕೊಣನೂರು ಹೋಬಳಿಗಳ ರೈತರಿಗೆ ಅನುಕೂಲವಾಗಲಿದೆ ಎಂದರು.




77 ಕೋಟಿ ರೂ. ವೆಚ್ಚದ 2ನೇ ಹಂತದ ಯೋಜನೆಯಲ್ಲಿ 85 ಕಿ.ಮೀ. ಕೊಳವೆಗಳ ಮೂಲಕ ಕೆರೆಗಳಿಗೆ ನೀರು ಹರಿಸಲು ಕ್ರಮ ಕೈಗೊಂಡಿದ್ದು ಈ ಯೋಜನೆಯಲ್ಲಿ ಕೊಣನೂರು ಮತ್ತು ಮಲ್ಲಿಪಟ್ಟಣ ಹೋಬಳಿ ವ್ಯಾಪ್ತಿಯ ಎಲ್ಲಾ ಕೆರೆಗಳಿಗೆ ನೀರು ಹರಿಯಲಿದೆ. ಕಣಿಯಾರು ಭಾಗದ ಕೆರೆಗಳಿಗೆ ನೀರು ಹರಿಸಲು 11.80 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಲಾಗಿದೆ. ಈ ಎಲ್ಲ ಯೋಜನೆಗಳಿಂದ ತಾಲ್ಲೂಕಿನ ಎಲ್ಲಾ ಭಾಗದ ಕೆರೆಕಟ್ಟೆಗಳು ತುಂಬಿ ಅಂತರ್ಜಲ ಹೆಚ್ಚಲಿದೆ ಎಂದರು.

ಈ ಯೋಜನೆ ವ್ಯಾಪ್ತಿಗೆ 79 ಹಳ್ಳಿಗಳ ಕೆರೆ ಕಟ್ಟೆಗಳನ್ನು ಗುರುತಿಸಲಾಗಿದೆ. ಅಲ್ಲದೆ ಉಳಿದ ಎಲ್ಲಾ ಗ್ರಾಮಗಳ ಕೆರೆಗಳನ್ನು ಬಳಕೆ ಮಾಡಿಕೊಂಡು ನೀರು ತುಂಬಿಸುವ ಕೆಲಸ ಕೂಡ ನಡೆಯಲಿದೆ. ಸೋಮವಾರಪೇಟೆ ತಾಲ್ಲೂಕಿನ 20 ಕೆರೆಕಟ್ಟೆಗಳು ಸಹ ಸೇರಿವೆ. ಅಂದು ಆರಂಭಿಕವಾಗಿ ರಾಜ್ಯ ಸರ್ಕಾರ 120 ಕೋಟಿ ರೂ. ಹಣ ಬಿಡುಗಡೆ ಮಾಡಿ ಕಾಮಗಾರಿಯನ್ನು 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡಿತ್ತು. ಆದರೆ ಕೆಲಸ ಮಾತ್ರ ಕೇವಲ ಪೈಪ್‌ಲೈನ್ ಅಳವಡಿಕೆಯಲ್ಲಿಯೇ ಸಾಗಿತ್ತು. ಹಿನ್ನೀರಿನಲ್ಲಿ ಜಾಕ್‌ವೆಲ್ ನಿರ್ಮಾಣ ಕೆಲಸ ಆರಂಭದಲ್ಲಿಯೇ ನನೆಗುದಿಗೆ ಬಿದ್ದಿತ್ತು. ಕಳೆದ ಜನವರಿಯಲ್ಲಿ ಜಾಕ್‌ವೆಲ್ ಕೆಲಸಕ್ಕೆ ಚಾಲನೆ ನೀಡಿ ಈಗಾಗಲೇ ಅದು ಮುಗಿಯುವ ಹಂತಕ್ಕೆ ಬಂದಿದೆ. ಮೋಟಾರ್ ಸೇರಿದಂತೆ ಇತರೆ ಉಪಕರಣಗಳು ಬಂದಿವೆ ಎಂದರು.

ಸಭೆಯಲ್ಲಿ ತಹಶೀಲ್ದಾರ್‌ಗಳಾದ ಸೌಮ್ಯ, ಕೃಷ್ಣಮೂರ್ತಿ, ಇಂಜಿನೀಯರ್ ರಘುಪತಿ, ಕಾರ್ಯಪಾಲಕ ಇಂಜಿನೀಯರ್ ಮಂಜುನಾಥ್, ಆರ್‌ಎಫ್‌ಒ ಯಶ್ಮಾ ಮಾಚಮ್ಮ, ನೀರಾವರಿ ಇಲಾಖೆ ಇಂಜಿನೀಯರ್ ಹಾಗೂ ರೈತರು ಇದ್ದರು.

## ಏ. 20ರಿಂದ ಮತ್ಸ್ಯಹೆಜ್ಜೆ ಕಲಾ ಪ್ರದರ್ಶನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಚಿತ್ಕಲಾ ಆರ್ಟ್ ಫೌಂಡೇಷನ್ ವತಿಯಿಂದ ನಗರದ ಕಲಾಶ್ರೀ ಆರ್ಟ್ ಗ್ಯಾಲರಿಯಲ್ಲಿ ಏ.20ರಿಂದ 27ರವರೆಗೆ ಮತ್ಸಹೆಜ್ಜೆ ಏಕವ್ಯಕ್ತಿ ಕಲಾ ಪ್ರದರ್ಶನ ಆಯೋಜಿಸಲಾಗಿದೆ.

ಏ.20 ರಂದು ಬೆಳಿಗ್ಗೆ 10.30ಕ್ಕೆ ಕಲಾ ಪ್ರದರ್ಶನವನ್ನು ಸಾಹಿತಿ ರೂಪಾ ಹಾಸನ ಉದ್ಘಾಟಿಸಲಿದ್ದಾರೆ. ಹಿರಿಯ ಕಲಾವಿದರಾದ ಬಿ.ಎಸ್.ದೇಸಾಯಿ ಅವರು ಕಲಾ ಪ್ರದರ್ಶನ ಸಂಬಂಧ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಕಲೆ ಮತ್ತು ಕಲಾಕೃತಿ ಕುರಿತು ಕಲಾವಿದ ಗಣಪತಿ ಅಗ್ನಿಹೋತ್ರಿ ಅವರು ಮಾತನಾಡಲಿದ್ದಾರೆ. ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ಮಾದಾಪುರ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕಿಯಾಗಿರುವ ಜಿ.ಶೋಭರಾಣಿ ಅವರ ರಚಿತ ಚಿತ್ರಗಳನ್ನು ಮತ್ಸಹೆಜ್ಜೆ ಹೆಸರಿನಡಿ ಪ್ರದರ್ಶನ ಮಾಡಲಾಗುತ್ತಿದೆ.

7 ದಿನಗಳ ಕಾಲ ಬೆಳಿಗ್ಗೆ 10 ಗಂಟೆಯಿಂದ ಸಂಜೆ 8ರವರೆಗೆ ಪ್ರದರ್ಶನ ವೀಕ್ಷಿಸಬಹುದಾಗಿದೆ ಎಂದು ಕಲಾಶ್ರೀ ಗ್ಯಾಲರಿಯ ಕಲಾವಿದರಾದ ಬಿ.ಎಸ್.ದೇಸಾಯಿ ಅವರು ತಿಳಿಸಿದ್ದಾರೆ.

## ನಾಳೆ ಕೃಷ್ಣೇಗೌಡ ಜನ್ಮ ದಿನಾಚರಣೆ




ಅರಕಲಗೂಡು: ಕಾಂಗ್ರೆಸ್ ಮುಖಂಡ ಎಂ.ಟಿ. ಕೃಷ್ಣೇಗೌಡ ಅಭಿಮಾನಿ ಬಳಗದಿಂದ ಏ. 20 ರಂದು ಸಂಜೆ 5 ಗಂಟೆಗೆ ಪಟ್ಟಣದ ಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಕೃಷ್ಣೇಗೌಡರ ಹುಟ್ಟು ಹಬ್ಬ ಹಮ್ಮಿಕೊಳ್ಳಲಾಗಿದೆ ಎಂದು ಅಭಿಮಾನಿ ಬಳಗದ ಮುಖಂಡ ಕೆ.ಟಿ.ರವೀಂದ್ರ ಕುಮಾರ್ ತಿಳಿಸಿದರು.

ಅಭಿಮಾನಿಗಳ ಬಳಗ ವತಿಯಿಂದ ಪ್ರತಿವರ್ಷವೂ ಕೃಷ್ಣೇಗೌಡರ ಹುಟ್ಟುಹಬ್ಬವನ್ನು ಸಮಾಜಮುಖಿಯಾಗಿ ಆಯೋಜಿಸಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು. ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 95ಕ್ಕಿಂತ ಹೆಚ್ಚು ಅಂಕ ಪಡೆದ ಸುಮಾರು 20 ವಿದ್ಯಾರ್ಥಿಗಳಿಗೆ ನಗದು ಪ್ರತಿಭಾ ಪುರಸ್ಕಾರ, ಪೌರ ಕಾರ್ಮಿಕರ ಸೇವೆ ಸ್ಮರಿಸಿ ಸುಮಾರು 40 ಪೌರಕಾರ್ಮಿಕರಿಗೆ ಸನ್ಮಾನ ಹಾಗೂ ಅರಕಲಗೂಡು ಮೂಲದ ವಿಜ್ಞಾನಿ ಡಾ. ಕೋಮಲ್ ಕುಮಾರ್, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ ಎಂ. ಬಿ. ಚನ್ನಕೇಶವ ಅವರು ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗೌರವಿಸಲಾಗುವುದು ಎಂದು ತಿಳಿಸಿದರು.

ಮುಖಂಡರಾದ ರಾಮೇಗೌಡ, ಎ.ಸಿ.ದೇವರಾಜೇಗೌಡ, ಲೋಕೇಶ್, ಕಾಂತರಾಜ್, ವಕೀಲ ರಾಜಶೇಖರ್ ಇದ್ದರು.

# ಡಾ.ಬಿ.ಆರ್.ಅಂಬೇಡ್ಕರ್ ವಿಶ್ವಶ್ರೇಷ್ಠ ಜ್ಞಾನಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಸಂವಿಧಾನ ಶಿಲ್ಪಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ವಿಶ್ವದ ಶ್ರೇಷ್ಠ ಚಿಂತಕರು ಹಾಗೂ ನೊಂದವರ, ಶೋಷಣೆಗೆ ಒಳಗಾದವರ, ಅಸಹಾಯಕರ ಧ್ವನಿಯಾಗಿದ್ದರು ಎಂದು ಐಪಿಎಸ್ ಅಧಿಕಾರಿ ಶಾಲು ಅವರು ತಿಳಿಸಿದರು.

ಪಟ್ಟಣದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದ ಆವರಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 134ನೇ ಜನ್ಮದಿನಾಚರಣೆಯಲ್ಲಿ ಮಾತನಾಡಿದರು.



ಪ್ರತಿಯೊಬ್ಬರು ವಿದ್ಯಾವಂತರಾಗಿ ಬಾಬಾ ಸಾಹೇಬರ ವಿಚಾರ, ಆದರ್ಶ, ತತ್ವ, ಮತ್ತು ಚಿಂತನೆ ಹಾಗೂ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಬದುಕನ್ನು ಮಾದರಿಯಾಗಿ ರೂಪಿಸಿಕೊಂಡಾಗ ಮಾತ್ರ ಬಾಬಾ ಸಾಹೇಬರ ಶ್ರಮ ಮತ್ತು ಹೋರಾಟ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ಸಂಘಟಕರು ಸಂವಿಧಾನದ ಮಹತ್ವ ಹಾಗೂ ಬಾಬಾ ಸಾಹೇಬರ ವಿಚಾರಧಾರೆಗಳನ್ನು ಪ್ರತಿ ಮನೆ ಮನಗಳಿಗೆ ತಲುಪಿಸುವ ಕಾರ್ಯದಲ್ಲಿ ತಮ್ಮನ್ನು ನಿರಂತರವಾಗಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಬೇಕು ಎಂದರು.

ಬಾಬಾ ಸಾಹೇಬರ ಹೆಸರು ಅವರ ಜನ್ಮದಿನಾಚರಣೆಗೆ ಮಾತ್ರ ಸೀಮಿತವಾಗಬಾರದು. ಅವರ ಹೆಸರಿನಲ್ಲಿ ವರ್ಷವಿಡೀ ಜನಪರ, ವಿದ್ಯಾರ್ಥಿಗಳ ಪರ, ನೊಂದವರಿಗೆ, ಶೋಷಿತರಿಗೆ, ಸೌಲಭ್ಯ ವಂಚಿತರಿಗೆ ನೆರವಾಗುವ ಕಾರ್ಯಕ್ರಮ ಹಮ್ಮಿಕೊಳ್ಳಲು ಸಂಘಟಿತರು ಮುಂದಾಗಬೇಕೆಂದು ಸಲಹೆ ನೀಡಿದರು.

ಸಮಿತಿ ವತಿಯಿಂದ ಬಾಬಾ ಸಾಹೇಬರ ಭಾವಚಿತ್ರವನ್ನು ಬೆಳ್ಳಿ ರಥದ ತೆರೆದ ವಾಹನದಲ್ಲಿ ಇಟ್ಟು ಅದ್ದೂರಿಯಾಗಿ ಪಟ್ಟಣದ ಪ್ರಮುಖ ಬೀದಿ ಮತ್ತು ವೃತ್ತಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಡಾ. ಬಿಆರ್ ಅಂಬೇಡ್ಕರ್ ಅನುಯಾಯಿಗಳು, ಅಭಿಮಾನಿಗಳು, ಜನಪ್ರತಿನಿಧಿಗಳು, ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು, ಸಂಘ ಸಂಸ್ಥೆಗಳ ಪ್ರಮುಖರು, ಎಲ್ಲಾ ಸಮುದಾಯಗಳ ಪ್ರಮುಖ ಮುಖಂಡರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮೆರವಣಿಗೆಗೆ ಕಲಾತಂಡಗಳು ಮೆರಗು ನೀಡಿದವು. ವಿವಿಧ ಇಲಾಖೆಗಳ ಅಧಿಕಾರಿಗಳನ್ನು ವೃತ್ತ ನಿರೀಕ್ಷಕ ಪ್ರದೀಪ್, ಪಿಎಸ್ಐ ಅಭಿಜಿತ್, ಸಲ್ಮಾನ್, ಸೇರಿದಂತೆ ನೂರಾರು ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಿತಿಯ ಪ್ರಮುಖರಾದ ಎಚ್.ಟಿ. ಲಕ್ಷ್ಮಣ, ಎನ್ ಕೃಷ್ಣಮೂರ್ತಿ, ಎಚ್.ಟಿ ಮುತ್ತುರಾಜ, ಎಚ್. ಆರ್. ರಂಗಸ್ವಾಮಿ, ಎಚ್.ಡಿ. ಉಮೇಶ್, ಎಚ್.ಡಿ. ಸುಪ್ರೀತ್, ತಾರೇಶ, ಹೆಚ್.ಎನ್. ರಾಘವೇಂದ್ರ, ಡಿ.ಎನ್. ಶಶಿಧರ್, ಎಚ್.ವೈ ಚಂದ್ರಶೇಖರ್, ಪಿ.ಅಣ್ಣಯ್ಯ ಮತ್ತಿತರರಿದ್ದರು.

# ಮೇ 11-12ಕ್ಕೆ ತೆಂಕಲಗೂಡು ಮಠದಲ್ಲಿ ಧಾರ್ಮಿಕ ಸಮ್ಮೇಳನ

ಸಕಲೇಶಪುರ: ತಾಲ್ಲೂಕಿನ ತೆಂಕಲಗೂಡು ಬೃಹನ್ಮಠದಲ್ಲಿ ಮೇ 11 ಹಾಗೂ 12 ರಂದು ಹಮ್ಮಿಕೊಂಡಿರುವ ಪಂಚಮಹೋತ್ಸವ ಹಾಗೂ ಧಾರ್ಮಿಕ ಸಮ್ಮೇಳನದ ಪೋಸ್ಟರ್, ಭಿತ್ತಿಪತ್ರಗಳನ್ನು ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ಬಿಡುಗಡೆ ಮಾಡಿದರು.

ಶ್ರೀಗಳು ಮಾತನಾಡಿ, ಧಾರ್ಮಿಕ ಮಠಗಳು ಧರ್ಮ ಕಾರ್ಯಗಳ ಜೊತೆಗೆ ಸಾಮಾಜಿಕ ಸೇವೆಗೂ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಲಿಂಗೈಕ್ಯ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ 5ನೇ ಪುಣ್ಯಸ್ಮರಣೆ, ಕಾಶಿ ಪೀಠದ ಜಗದ್ಗುರು ಶ್ರೀ ಡಾ. ಮಲ್ಲಿಕಾರ್ಜುನ ಸ್ವಾಮೀಜಿಯ ಅಡ್ಡ ಪಲ್ಲಕ್ಕಿ ಮಹೋತ್ಸವ, ಜನಜಾಗೃತಿ ಧರ್ಮ ಸಮಾವೇಶ, ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ 5ನೇ ವರ್ಷದ ಪಟ್ಟಾಧಿಕಾರದ ವರ್ಧಂತಿ ಹಾಗೂ 30ನೇ ಜನ್ಮದಿನೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಹಾಗೂ



ಸಮಾಜಮುಖಿ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ತುರ್ತು ಪರಿಸ್ಥಿತಿಗಳಲ್ಲಿನ ರೋಗಿಗಳ ಜೀವ ಸಂರಕ್ಷಣೆಗಾಗಿ ಸಿಪಿಆರ್ ತರಬೇತಿ ಆಯೋಜಿಸಲಾಗಿದೆ. ತಜ್ಞ ವೈದ್ಯರ ತಂಡ ಶಿಬಿರದಲ್ಲಿ ಭಾಗವಹಿಸಲಿದ್ದು, ಸಾರ್ವಜನಿಕರು ಪ್ರಯೋಜನ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

# ಸಂಭ್ರಮದ ಹುಚ್ಚಮ್ಮದೇವಿ ಮಹಾರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾರನಹಳ್ಳಿ: ಸಮೀಪದ ಯಳವಾರೆ ಗ್ರಾಮ ದೇವತೆ ಹುಚ್ಚಮ್ಮ ದೇವಿ ಮಹಾರಥೋತ್ಸವ ವೈಭವದಿಂದ ನೆರವೇರಿತು.

ಯಳವಾರೆ ಹುಚ್ಚಮ್ಮ ದೇವಿ ಮೂಲ ಸನ್ನಿದಾನದ ಅಮ್ಮನವರಿಗೆ ಹೊಸದಾಗಿ ಮಾಡಿಸಿದ ಬೆಳ್ಳಿ ಪ್ರಭಾವಳಿ ವಿಶೇಷ ಹೂವುಗಳಿಂದ ಅಮ್ಮ ನವರನ್ನು ಶೃಂಗಾರ ಮಾಡಿದ್ದು ದೂರದ ಊರುಗಳಿಂದ ಬಂದ ಭಕ್ತರು ಅಮ್ಮನವರಿಗೆ ಹಣ್ಣುಕಾಯಿ ಪೂಜೆ ಮಾಡಿಸಿ ಹರಕೆ ತಿರಿಸಿದರು. ಯಳವಾರೆ ಗ್ರಾಮದ ದೇವಾಲಯದಿಂದ ಶ್ರೀ ಗುರು ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಅವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಶ್ರೀ ಚಲುವರಾಯಸ್ವಾಮಿ ದೇವರು ಸ್ವಾಮಿಗೆ




ಮಹಾಮಂಗಳಾರತಿ ಮಾಡಿದ ನಂತರ ನೆಡಮುಡಿಯಲ್ಲಿ ಉತ್ಸವ ಮಾಡಿ ರಥಾರೋಹಣ ಮಾಡಿಸಿದರು.

ರಥ ಬೀದಿಯಲ್ಲಿ ಯಳವಾರೆ ಹುಚ್ಚಮ್ಮದೇವಿ ಹಾರನಹಳ್ಳಿ ಗ್ರಾಮದೇವತೆ ಶ್ರೀ ಕೋಡಮ್ಮದೇವಿ, ಧೂತರಾರಸ್ವಾಮಿ, ಚಲುವರಾಯಸ್ವಾಮಿ, ಧೂತರಾಯಸ್ವಾಮಿಗೆ ಹೊಂಬಾಳೆ, ವಿವಿಧ ಹೂವುಗಳಿಂದ ಶೃಂಗಾರ ಮಾಡಿ ಸಿಡಿ ಕಂಬಕ್ಕೆ ಪೂಜೆ ಮಾಡಿ ಸಿಡಿ ಸೇವೆ ನೆರವೇರಿಸಲಾಯಿತು.

ಯಳವಾರೆ ಹುಚ್ಚಮ್ಮದೇವಿ ಹಾರನಹಳ್ಳಿ ಗ್ರಾಮ ದೇವತೆ ಶ್ರೀ ಕೋಡಮ್ಮದೇವಿ , ಅಮ್ಮನವರನ್ನು ಉಯ್ಯಾಲೆಯಲ್ಲಿ ಕೂರಿಸಿ ಚಲುವರಾಯಸ್ವಾಮಿ ಅವರು ಪೂಜೆ ಸಲ್ಲಿಸಿದ ನಂತರ ಭಕ್ತರು ಉಯ್ಯಾಲೆ ಸೇವೆ ಮಾಡಿದರು. ಯಾದಾಪುರದ ಶ್ರೀ ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಅವರನ್ನು ರಥದಲ್ಲಿ ಕುಳ್ಳಿರಿಸಿ ರಥೋತ್ಸವ ನಡೆಯಿತು. ಭಕ್ತರು ಕರ್ಪೂರ ಹಚ್ಚಿ ರಥಕ್ಕೆ ಬಾಳೆ ಹಣ್ಣು ಎಸೆದು ಅಜಯ್ಯನವರನ್ನು ಪ್ರಾರ್ಥಿಸಿದರು.

# ರೈತರಿಗೆ ಅನ್ಯಾಯ ಆಗದಂತೆ ಎಚ್ಚರ ವಹಿಸಿ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಬಗರ್‌ಹುಕುಂಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿರುವ ಯಾವ ರೈತರಿಗೂ ಅನ್ಯಾಯ ಆಗದಂತೆ, ದಾಖಲೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಮುಂದಿನ ಸಭೆಯಲ್ಲಿ ಸಾಗುವಳಿ ಪತ್ರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಸಿಮೆಂಟ್ ಮಂಜು ಅಧಿಕಾರಿಗಳಿಗೆ ಸೂಚಿಸಿದರು.

ಆಲೂರು- ಸಕಲೇಶಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆಲೂರು ತಾಲ್ಲೂಕಿನ ರೈತರಿಗೆ ಬಗರ್ ಹುಕುಂ ಸಾಗುವಳಿ ಮಂಜೂರಾತಿಗಾಗಿ ತಾಲ್ಲೂಕು ಆಡಳಿತ ಸೌಧದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಅನೇಕ ವರ್ಷಗಳಿಂದ ಉಳುಮೆ ಮಾಡುತ್ತಿದ್ದು, ನಿಯಮಾನುಸಾರ



ಅರ್ಜಿ ಸಲ್ಲಿಸಿ ಅನುಭವದಲ್ಲಿರುವ ರೈತರ ಜಮೀನುಗಳ ಬಳಿ ತೆರಳಿ ತಹಶೀಲ್ದಾರ್ ಹಾಗೂ ಕಂದಾಯ ಅಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಜಮೀನಿಗೆ ಸಂಬಂಧಿಸಿದಂತೆ ರೈತರನ್ನು ಅನಗತ್ಯವಾಗಿ ಕಚೇರಿಗೆ ಅಲೆದಾಡಿಸಬಾರದು. ಮಧ್ಯವರ್ತಿಗಳಿಗೆ ಅವಕಾಶ ನೀಡದೇ ಫಲಾನುಭವಿ ರೈತರಿಗೆ ಅನುಕೂಲ ಮಾಡಿಕೊಡಲು ಅಧಿಕಾರಿಗಳು ಮುಂದಾಗಬೇಕು. ಯಾವುದೇ ಸಮಸ್ಯೆ ಇದ್ದಲ್ಲಿ ಗಮನಕ್ಕೆ ತರಬೇಕು. ಅನ್ಯಾಯ ಆಗದಂತೆ ಪಾರದರ್ಶಕವಾಗಿ ಪರಿಶೀಲಿಸಿ, ನಿಯಮಾನುಸಾರ ಅರ್ಹ ರೈತರಿಗೆ ಸಾಗುವಳಿ ಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಎರಡು ವರ್ಷಗಳ ನಂತರ ಬಗರ್ ಹುಕುಂ ಸಮಿತಿ ಸಭೆ ನಡೆಯುತ್ತಿದ್ದು, 26 ಫಲಾನುಭವಿಗಳ ಪೈಕಿ, ಗುರುವಾರ ನಡೆದ ಸಭೆಯಲ್ಲಿ ಎರಡು ಅರ್ಜಿಗಳನ್ನು ಅನುಮೋದಿಸಲಾಯಿತು. ಉಳಿದ 24 ಅರ್ಜಿಗಳಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲಿಸಿ, ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

ತಹಶೀಲ್ದಾರ್ ಎಚ್. ಮಲ್ಲಿಕಾರ್ಜುನ್, ಸದಸ್ಯರಾದ ಎಚ್.ಎಚ್. ಉದಯ್, ಚಂದ್ರಶೇಖರ್, ಗೀತಾ, ಉಪ ತಹಶೀಲ್ದಾರ್ ಎಂ.ಎ.ಅಂಕೆಗೌಡ, ಭೂಮಿ ಸಂಯೋಜಕ ಪ್ರದೀಪ್, ಹೋಬಳಿಗಳ ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

ಸಮಿತಿಯ ಪ್ರಮುಖರಾದ ಎಚ್.ಟಿ. ಲಕ್ಷ್ಮಣ, ಎನ್ ಕೃಷ್ಣಮೂರ್ತಿ, ಎಚ್.ಟಿ. ಮುತ್ತುರಾಜ, ಎಚ್. ಆರ್. ರಂಗಸ್ವಾಮಿ, ಎಚ್.ಡಿ. ಉಮೇಶ್, ಎಚ್.ಡಿ. ಸುಪ್ರೀತ್, ತಾರೇಶ, ಹೆಚ್. ಎನ್. ರಾಘವೇಂದ್ರ, ಡಿ.ಎನ್. ಶಶಿಧರ್, ಎಚ್.ವೈ ಚಂದ್ರಶೇಖರ್, ಪಿ.ಅಣ್ಣಯ್ಯ ಮತ್ತಿತರರಿದ್ದರು.

# ಶುಂಠಿ ಖರೀದಿ ಕೇಂದ್ರ ಆರಂಭಿಸಿ ಕಣಗಾಲ್ ಮೂರ್ತಿ ಆಗ್ರಹ




ಹಾಸನ: ರಾಜ್ಯ ಸರ್ಕಾರದ ಆದೇಶದಂತೆ ಹಸಿ ಶುಂಠಿಯನ್ನು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಹಸಿ ಶುಂಠಿ ಖರೀದಿ ಕೇಂದ್ರವನ್ನು ಶೀಘ್ರ ಪ್ರಾರಂಭಿಸಬೇಕೆಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಬಲ ಬೆಲೆಯಲ್ಲಿ ಹಸಿ ಶುಂಠಿಯನ್ನು ಖರೀದಿ ಮಾಡುವಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರವನ್ನು ಆಗ್ರಹಿಸಲಾಗಿತ್ತು. ಈ ಹಿನ್ನೆಲೆ ಕೇಂದ್ರ ಸರ್ಕಾರ ಪ್ರತಿ ಕೆ.ಜಿ.ಗೆ 24 ರೂಪಾಯಿ 45ಪೈಸೆಯಂತೆ ಶುಂಠಿ ಖರೀದಿ ಮಾಡಲು ಒಪ್ಪಿಗೆ ಸೂಚಿಸಿದೆ. ಶುಂಠಿ ಬೆಳೆಯಲು ರೈತರಿಗೆ ಖರ್ಚು ಹೆಚ್ಚಾಗುತ್ತಿದ್ದು ಕನಿಷ್ಠ ಪ್ರತಿ ಕೆ.ಜಿ.ಗೆ 42 ರೂ. ನಿಗದಿ ಮಾಡುವಂತೆ ಒತ್ತಾಯಿಸಲಾಗಿತ್ತು. ಆದರೆ ಕೇವಲ 24.45 ರೂ.ಗಳಲ್ಲಿ ಶುಂಠಿ ಖರೀದಿಗೆ ಸರ್ಕಾರ ಒಪ್ಪಿಗೆ ಸೂಚಿಸಿದೆ. ಈ ಸಂಬಂಧ ನ್ಯಾಯಾಲಯದ ಮೂಲಕ ಖರೀದಿ ದರ ಏರಿಕೆ ಮಾಡಲು ಹೋರಾಟ ನಡೆಸಲಾಗುವುದು ಎಂದರು.

ಜಿಲ್ಲೆಯಲ್ಲಿ ನೂರಾರು ಎಕರೆಯಲ್ಲಿ ಶುಂಠಿ ಬೆಳೆಯಲಾಗುತ್ತಿದೆ. ಎಕರೆಗೆ 30 ಕ್ವಿಂಟಾಲ್ ಶುಂಠಿ ಖರೀದಿ ಮಾಡಬಹುದಾಗಿದೆ. ರೈತರು ತಮ್ಮ ಬಳಿ ಇರುವ ಶುಂಠಿಯನ್ನು ಎಪಿಎಂಸಿಗೆ ತಂದು ಮಾರಾಟ ಮಾಡಬಹುದು. ಇಲ್ಲಿ ಯಾವುದೇ ರೀತಿ ಮೋಸವಾಗುವುದಿಲ್ಲ ಎಂಬ ಜಿಲ್ಲಾಧಿಕಾರಿ ಮೇಲೆ ಭರವಸೆ ನೀಡಿದ್ದಾರೆ. ಲೋಪಕಂಡುಬಂದಲ್ಲಿ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ರೈತ ಸಂಘದ ರುಕ್ಮಾಂಗದ, ಪಾಲಾಕ್ಷ, ತಾಲ್ಲೂಕು ಅಧ್ಯಕ್ಷ ಮಂಜುನಾಥ್, ಬಸವರಾಜು, ಹರೀಶ್ ಹಾಜರಿದ್ದರು.

# ಕೇಂದ್ರ ಸರ್ಕಾರದ ವಿರುದ್ಧ ಸಕಲೇಶಪುರದಲ್ಲಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಡೀಸೆಲ್, ಪೆಟ್ರೋಲ್, ಗ್ಯಾಸ್ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಕೆ ನೀತಿ ಕಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ತಾಲ್ಲೂಕು ಯುವ ಕಾಂಗ್ರೆಸ್ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಹಳೆ ಬಸ್ ನಿಲ್ದಾಣದ ಎದುರು ಜಮಾಯಿಸಿದ ಕಾರ್ಯಕರ್ತರು, ಕೆಲಕಾಲ ರಸ್ತೆ ತಡೆದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ರಂಜಿತ್ ಗೊರೂರು ಮಾತನಾಡಿ, ಕಳೆದ 10 ವರ್ಷಗಳಿಂದ ಕಚ್ಚಾ ತೈಲಗಳ ಬೆಲೆ ಇಳಿಕೆಯಾದರೂ, ಪೆಟ್ರೋಲ್ ಮತ್ತು ಡೀಸೆಲ್ ದರ ನಿಯಂತ್ರಿಸದ ಕೇಂದ್ರ ಸರ್ಕಾರ ಮತ್ತೊಮ್ಮೆ ಸಿಲಿಂಡರ್




ದರವನ್ನು 50 ರೂ.ಗೆ ಏರಿಸಿ ದೇಶದ ಭವಿಷ್ಯವನ್ನು ಆತಂಕಕ್ಕೆ ದೂಡಿದೆ. ಕೇಂದ್ರ ಸರ್ಕಾರ ಬಡವರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ ಎಂದರು.

ಧರ್ಮ ಹೆನ್ನಲಿ ಮಾತನಾಡಿ, ಕೇಂದ್ರ ಸರ್ಕಾರದ ನೀತಿಗಳಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಕೇಂದ್ರ ಸರ್ಕಾರದ ತಪ್ಪುಗಳನ್ನು ಮರೆಮಾಚಲು ಬಿಜೆಪಿ ಜನಾಕ್ರೋಶ ಯಾತ್ರೆಯ ನಾಟಕವಾಡುತ್ತಿದೆ ಎಂದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿದ್ದ ಭರವಸೆಯಂತೆ ಪಂಚ ಗ್ಯಾರಂಟಿಗಳನ್ನು ಈಡೇರಿಸಿ ಜನಸಾಮಾನ್ಯರ ಮನ ಗೆದ್ದಿದೆ. ಅದನ್ನು ಸಹಿಸಲಾಗದೆ ಬಿಜೆಪಿ ಜನಾಕ್ರೋಶ ಯಾತ್ರೆಯ ನಾಟಕವಾಡುತ್ತಿದ್ದು ಇದನ್ನು ಜಿಲ್ಲಾ ಯುವ ಕಾಂಗ್ರೆಸ್ ಖಂಡಿಸುತ್ತದೆ ಎಂದು ತಿಳಿಸಿದರು.

ಕಾಂಗ್ರೆಸ್ ಯುವ ಮುಖಂಡರಾದ ಭುವನಾಕ್ಷ, ಧರ್ಮ, ಗಣೇಶ್ ಇತರರಿದ್ದರು.

# ಅರಸೀಕೆರೆ ಸಿಡಿಪಿಓ ವಿರುದ್ಧ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಂಕರಮೂರ್ತಿ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂದಿದ್ದು ಕೂಡಲೇ ಅವರನ್ನು ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಅಂಗನವಾಡಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲಾಖೆಯಿಂದ ಅಂಗನವಾಡಿ ಕಾರ್ಯಕರ್ತೆಯರ ಖಾತೆಗೆ ಬರುವ ಪ್ರತಿ ಹಣದಲ್ಲಿಯೂ ಪಾಲು ಕೊಡಲೇಬೇಕು. ಬಾಡಿಗೆ ಹಣ, ಹೊಸ ಅಂಗನವಾಡಿ ಕೇಂದ್ರಗಳ ನಿರ್ವಹಣೆಗೆ ಕೊಡುವ ಹಣವನ್ನು ಮಾರ್ಚ್ 10 ರಂದು 10 ಅಂಗನವಾಡಿಗಳಿಗೆ 3000 ರೂ. ಗಳಂತೆ ಹಾಕಿ ಪ್ರತಿ ಕೇಂದ್ರದಿಂದ 2500 ರೂ. ವಾಪಸ್ ಪಡೆದಿದ್ದಾರೆ ಎಂದು ದೂರಿದರು.



ಜಾವಗಲ್ ಸರ್ಕಲ್‌ನಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಎರಡು ವರ್ಷದಿಂದ ಮೊಟ್ಟೆ ವಿತರಣೆ ಮಾಡಿಲ್ಲ. ಅಂಗನವಾಡಿ ಕೇಂದ್ರಗಳಿಗೆ ಕಡಿಮೆ ಆಹಾರ ಸಾಮಗ್ರಿ ನೀಡಿ, ಹೆಚ್ಚಿನ ಆಹಾರ ಸಾಮಗ್ರಿಗಳಿಗೆ ಸಹಿ ಪಡೆದುಕೊಂಡಿದ್ದಾರೆ. ಸಹಿ ಮಾಡದಿದ್ದವರಿಗೆ ಕಿರುಕುಳ ನೀಡಲಾಗುತ್ತಿದೆ. ಬಾಂಡ್ ಮೆಚ್ಯುರಿಟಿಯಾದ ಭಾಗ್ಯಲಕ್ಷ್ಮಿ ಫಲಾನುಭವಿಗಳ ಬಳಿ ಹಣ ಸಂಗ್ರಹ ಮಾಡಲು ಕಾರ್ಯಕರ್ತೆಯರಿಗೆ ಒತ್ತಾಯಿಸಲಾಗುತ್ತಿದೆ ಎಂದು ಆರೋಪಿಸಿದರು.

ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮೀ, ಪ್ರಧಾನ ಕಾರ್ಯದರ್ಶಿ ಸುನಂದ, ಜಿಲ್ಲಾಧ್ಯಕ್ಷೆ ಎಂ.ಬಿ.ಪುಷ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಮಂಜುಳಾ, ಜಿ.ಪಿ. ಶೈಲಜಾ, ಕೆ.ಪಿ.ವೀಣಾ, ಹೆಚ್. ಎಸ್.ಸುಮಿತ್ರಾ, ಟಿ.ಹೆಚ್.ಜಯಂತಿ, ಬಿ.ಕೆ.ಸಂಗೀತಾ, ಜರೀನಾ, ಮೋಹನ್ ಕುಮಾರಿ, ಎಂ.ಆರ್.ಗೀತಾ ಇದ್ದರು.

## ಇತಿಹಾಸದಲ್ಲಿ ಈ ದಿನ

**ಏಪ್ರಿಲ್ 19**

- 1910: ಖುದಿರಾಂ ಬೋಸ್‌ನ ಸಹಚರ ಪ್ರಫುಲ್ಲ ಚಾಕಿ ಆತ್ಮಹತ್ಯೆಗೆ ಶರಣಾದರು: ಬ್ರಿಟಿಷ್ ಅಧಿಕಾರಿಯ ಮೇಲೆ ಬಾಂಬ್ ಎಸೆದ ಪ್ರಕರಣದಲ್ಲಿ ಬಂಧಿತರಾಗದಿರಲು ಪ್ರಫುಲ್ಲ ಚಾಕಿ ಈ ದಾರಿ ಹಿಡಿದರು.
- 1975: ಭಾರತದ ಮೊದಲ ಉಪಗ್ರಹ ಆರ್ಯಭಟ ಉಡಾವಣೆ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಉಡಾವಣೆ ಮಾಡಿದ ಭಾರತದ ಮೊದಲ ಉಪಗ್ರಹ ಆರ್ಯಭಟ ರಷ್ಯಾದ ಸಹಾಯದಿಂದ ಕಾಕ್‌ಸಿನ್ ಉಡಾವಣೆ ಕೇಂದ್ರದಿಂದ ಚಿಮ್ಮಿತು.

**ವಿದೇಶ**

- 1775: ಅಮೆರಿಕದ ಸ್ವಾತಂತ್ರ್ಯ ಯುದ್ಧ ಆರಂಭ: ಲೆಕ್ಸಿಂಗ್ಟನ್ ಮತ್ತು ಕಾಂಕೋರ್ಡ್‌ನ ಯುದ್ಧಗಳು ನಡೆದವು. ಈ ಮೂಲಕ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಅಮೆರಿಕದ ಉಪನಿವೇಶಗಳು ಬಂಡಾಯದ ಆರಂಭ ಮಾಡಿತು.
- 1943: ವಾರ್ಸಾ ಗೆಟ್ಟೊ ಬಂಡಾಯ: ನಾಜಿ ನಿಯಂತ್ರಣದಲ್ಲಿದ್ದ ಪೋಲೆಂಡ್‌ನ ವಾರ್ಸಾದಲ್ಲಿ ಯಹೂದಿಗಳು ನಾಜಿಗಳ ವಿರುದ್ಧ ಬಂಡಾಯ ಎದ್ದರು.
- 1995: ಓಕ್ಲಹೋಮಾ ಸಿಟಿ ಬಾಂಬ್ ದಾಳಿ (ಅಮೆರಿಕ): ಟಿಮೋಥಿ ಮೆಕ್‌ವೆ ಎಂಬ ವ್ಯಕ್ತಿ ನಡೆಸಿದ ಈ ದಾಳಿಯಲ್ಲಿ 168 ಮಂದಿ ಪ್ರಾಣ ಕಳೆದುಕೊಂಡರು. ಅಮೆರಿಕದ ನೆಲದಲ್ಲೇ ನಡೆದ ಅತೀ ಭಯಾನಕ ಉಗ್ರ ದಾಳಿಗಳಲ್ಲಿ ಇದು ಒಂದು.

# ಭಾರತದ ಬಾಹ್ಯಾಕಾಶ ಯುಗಕ್ಕೆ ತೆರೆ ಸರಿಸಿದ ದಿನ

## ಆರ್ಯಭಟ ಉಪಗ್ರಹದ ಸಾಹಸಮಯ ಉಡಾವಣೆಗೆ ಐವತ್ತು ವರ್ಷ!

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಭಾರತದ ಮೊಟ್ಟ ಮೊದಲ ಉಪಗ್ರಹ ಕಕ್ಷೆಗೆ ಚಿಮ್ಮಿ ಇಂದಿಗೆ ಅರ್ಧ ಶತಮಾನ ಕಳೆದಿದೆ. ಅಲ್ಲಿಂದ ಈಚೆಗೆ ನಮ್ಮ ದೇಶ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮುಂಚೂಣಿ ರಾಷ್ಟ್ರಗಳ ಸರಿಸಮನಾಗಿ ನಿಲ್ಲುವ ಮಟ್ಟಿಗೆ ಬೆಳವಣಿಗೆ ಕಂಡಿದೆ.


ಆರ್ಯಭಟ ಉಡಾವಣೆ ಭಾರತದ ಬಾಹ್ಯಾಕಾಶ ಕ್ಷೇತ್ರದ ಹೊಸ ಅಧ್ಯಾಯದ ಆರಂಭವಾಗಿತ್ತು. ಈ ಸಾಧನೆಯ ನಂತರದ ಉಪಗ್ರಹಗಳ ಅಭಿವೃದ್ಧಿಗೆ ಸ್ಫೂರ್ತಿಯಾಗಿದ್ದು, ಇಂದಿನ ಚಂದ್ರಯಾನ ಮತ್ತು ಗಗನಯಾನದತ್ತ ದಾರಿ ತೆರೆದಿದ್ದು ಆರ್ಯಭಟ ಯೋಜನೆ ಯಶಸ್ಸು. ಇಂದು ನಾವು ಬಾಹ್ಯಾಕಾಶದ ಗಂಭೀರ ಯೋಜನೆಗಳ ಬಗ್ಗೆ ಮಾತನಾಡುವಷ್ಟು ತಾಂತ್ರಿಕವಾಗಿ ಬಲಿಷ್ಠರಾಗಿರುವುದರ ಹಿಂದಿನ ಪಿತಾಮಹನೆಂದರೆ ಅದು ಆರ್ಯಭಟ. ಇಂತಹ ಮಹತ್ಕಾರ್ಯದ ಹಿಂದಿನ ಶಕ್ತಿ, ಮಹತ್ವಗಳ ಬಗ್ಗೆ ಕನ್ನಡ ಪೋಸ್ಟ್ ಸ್ಪೆಷಲ್ ಇಲ್ಲಿದೆ.

1975ರ ಏಪ್ರಿಲ್ 19ಭಾರತ ತನ್ನ ಮೊದಲ ಉಪಗ್ರಹ ಆರ್ಯಭಟವನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿ, ವಿಶ್ವದ ವಿಜ್ಞಾನ ಭೂಪಟದಲ್ಲಿ ತಾನು ಹೆಜ್ಜೆ ಗುರುತು ಮೂಡಿಸಿರುವುದನ್ನು ದೃಢಪಡಿಸಿತು.

1975ರ ಏಪ್ರಿಲ್ 19ರಂದು ಭಾರತದ ಬಾಹ್ಯಾಕಾಶ ಪ್ರಯಾಣಕ್ಕೆ ಹೊಸ ತಿರುವು ಸಿಕ್ಕಿತು. ಭಾರತದ ಮೊದಲ ಉಪಗ್ರಹ ಆರ್ಯಭಟವನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಈ ಐತಿಹಾಸಿಕ ಬೆಳವಣಿಗೆಯ ಮೂಲಕ ಭಾರತ, ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ತನ್ನ ಪದಾರ್ಪಣೆಯನ್ನು ಘೋಷಿಸಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಈ ಮಹತ್ತರ ಸಾಧನೆಯ ಹಿಂದಿನ ಶಕ್ತಿಯಾಗಿದ್ದು, ಈ ಪ್ರಪಂಚದ ಸಮರ್ಥ ವಿಜ್ಞಾನಿಗಳ ಪರಿಶ್ರಮದ ಫಲವಾಗಿ ಈ ಸಾಧನೆ ಸಾಧ್ಯವಾಯಿತು.

### ವಿಜ್ಞಾನಿಗಳ ಪರಿಶ್ರಮ ಮತ್ತು ನೇತೃತ್ವ

ಈ ಮಹತ್ತರ ಯೋಜನೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಯು. ಆರ್. ರಾವ್ ಅವರು ಈ ಸಾಧನೆಗೆ ಮಾರ್ಗದರ್ಶಕರಾಗಿ, ತಾಂತ್ರಿಕ ಹಾಗೂ ರಾಜಕೀಯ ಅಡೆತಡೆಗಳನ್ನು ತೀರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತವನ್ನು ಮುನ್ನಡೆಸಿದ ಡಾ. ವಿಕ್ರಂ ಸರಾಭಾಯ್ ಅವರ ದೃಷ್ಟಿಕೋನ ಮತ್ತು ಕನಸು ಈ ಯೋಜನೆಯ ಮೂಲ ಶಕ್ತಿಯಾಗಿತ್ತು. ಏಕೆಂದರೆ ಅವರು ಈ ಯೋಜನೆಗೆ ಪೂರ್ವಭಾವಿ ಬುನಾದಿ ಹಾಕಿದ್ದರು.



### ಆರ್ಯಭಟ ತಾಂತ್ರಿಕ ವೈಶಿಷ್ಟ್ಯಗಳು


- ತೂಕ: 360 ಕಿಲೋಗ್ರಾಂ
- ಆಕಾರ: 26-ಪಕ್ಷದ ಬಹುಭುಜಾಕೃತಿ
- ವಿದ್ಯುತ್ ಶಕ್ತಿ: 46 ವ್ಯಾಟ್ ಸೌರ ಕೋಶಗಳ ಮೂಲಕ
- ಬಾಂಡ್‌ವಿಡ್ತ್: 256 ಬಿಟ್/ಸೆಕೆಂಡ್
- ಕಕ್ಷೆ: 619 ಕಿ.ಮೀ. (ಅಪೋಜಿ), 563 ಕಿ.ಮೀ. (ಪೆರಿಜಿ), 96.46 ನಿಮಿಷಗಳ ಅವಧಿ
- ಉದ್ದೇಶ: ಕಿರಣ ಜ್ಯೋತಿಷ್ಯ, ವಾಯುವಿಜ್ಞಾನ, ಸೌರ ಶಕ್ತಿ ಅಧ್ಯಯನ

### ಹೆಮ್ಮೆಯ ದ್ಯೋತಕ

ಈ ಸಾಧನೆಯ ಮಹತ್ವವನ್ನು ಸರ್ಕಾರವೂ ಗುರುತಿಸಿತು. ಆರ್ಯಭಟ ಉಪಗ್ರಹದ ಚಿತ್ರ 1976ರಿಂದ 1997ರ ವರೆಗೆ 2 ರೂಪಾಯಿ ನೋಟಿನಲ್ಲಿ ಮುದ್ರಣಗೊಂಡಿತ್ತು. ಈ ಮೂಲಕ ಇದು ಕೇವಲ ವಿಜ್ಞಾನದ ಸಾಧನೆಯಷ್ಟೇ ಅಲ್ಲದೆ, ರಾಷ್ಟ್ರದ ಪ್ರಗತಿಯ ಸಂಕೇತವಾಗಿಯೂ ಗುರುತಿಸಲ್ಪಟ್ಟಿತು.

### ಉಡಾವಣೆಯ ಐತಿಹಾಸಿಕ ಹಿನ್ನೆಲೆ

ಆರ್ಯಭಟ ಉಪಗ್ರಹಕ್ಕೆ 5ನೇ ಶತಮಾನದಲ್ಲಿ ಬದುಕಿದ್ದ ಜ್ಯೋತಿಷಿ ಮತ್ತು ಗಣಿತಜ್ಞ ಆರ್ಯಭಟನ ಹೆಸರಿನ ನಾಮಕರಣ ಮಾಡಲಾಗಿತ್ತು. ಈ ಉಪಗ್ರಹ 1972ರ ಭಾರತ-ಸೋವಿಯೆಟ್ ಯೂನಿಯನ್ ನಡುವೆ ನಡೆದ ಒಪ್ಪಂದದ ಫಲವಾಗಿ ರಷ್ಯಾದ ಕಾಕ್‌ಸಿನ್ ಯಾರ್ ಉಡಾವಣೆ ಕೇಂದ್ರದಿಂದ ಏಪ್ರಿಲ್ 19, 1975ರಂದು ಬೆಳಗ್ಗೆ 7.30ಕ್ಕೆ ಉಡಾವಣೆಯಾಗಿತ್ತು. ಕೋಸ್ಮೋಸ್-3 ಉಡಾವಣೆ ವಾಹನವನ್ನು ಉಪಯೋಗಿಸಲಾಗಿದ್ದು, ಇದು ಇಂಟರ್ ಕೋಸ್‌ಮೋಸ್ ಕಾರ್ಯಕ್ರಮದ ಭಾಗವಾಗಿತ್ತು.




### ಸಾಧನೆ, ಸವಾಲು ಮತ್ತು ಪಾಠ

ಆರ್ಯಭಟ ಉಪಗ್ರಹ ಉಡಾವಣೆ ವೈಜ್ಞಾನಿಕ ದೃಷ್ಟಿಕೋನದಿಂದ ಯಶಸ್ವಿಯಾಗಿದ್ದರೂ, ಇಂಧನ ವ್ಯವಸ್ಥೆಯ ವೈಫಲ್ಯದಿಂದಾಗಿ ಕೇವಲ ನಾಲ್ಕೇ ದಿನಗಳಲ್ಲಿ ಇದರ ವೈಜ್ಞಾನಿಕ ಕಾರ್ಯಾಚರಣೆ ಸ್ಥಗಿತಗೊಂಡಿತು. ಉಪಗ್ರಹದ ಸಂಪರ್ಕ ಐದು ದಿನಗಳ ಬಳಿಕ ಕಡಿತಗೊಂಡರೂ ಅದು 1981ರ ವರೆಗೆ ಕಕ್ಷೆಯಲ್ಲಿ ಸುತ್ತುತ್ತ ಜೀವಂತವಾಗಿತ್ತು. 1992ರ ಫೆಬ್ರವರಿ 10ರಂದು ಉಪಗ್ರಹವು ಭೂಮಿಯ ವಾತಾವರಣಕ್ಕೆ ಪ್ರವೇಶಿಸಿ ನಾಶವಾಯಿತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248